# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/21/2015.16; ದಿನಾಂಕ: 28.07.2016

| ವಾದಿ | ಪ್ರತಿವಾದಿ |
|---|---|
| 1.ನಿಂಗಮ್ಮ ತಾಯಿ ಲೇಟ್ ಮರಿಯವ್ವ<br>2.ಕಮಲಮ್ಮ ತಾಯಿ ಲೇಟ್ ಮರಿಯವ್ವ<br>3.ದುರುಗವ್ವ ತಾಯಿ ಲೇಟ್ ಮರಿಯವ್ವ<br>4.ಕೋಟೆಪ್ಪ ತಾಯಿ ಲೇಟ್ ಮರಿಯವ್ವ<br>ವಲ್ಲಭಾಪುರ ಗ್ರಾಮ,ಹ.ಬೊ.ಹಳ್ಳಿ(ತಾ) | ಹರಿಜನ ದೊಡ್ಡ ಹನುಮಂತಪ್ಪ ತಂದೆ ಕೊರಪ್ಪ<br>ವಲ್ಲಭಾಪುರ ಗ್ರಾಮ, ಹ.ಬೊ.ಹಳ್ಳಿ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.578/2 ವಿ: 04.98 ಎಕರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.578/2 ವಿ: 04.98 ಎಕರೆ ಜಮೀನನ್ನು ಪೋತಿವಾರಸು ಪ್ರಕಾರ ವಾದಿಗಳ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-53/2015-16; ದಿ:02.01.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-24.03.16 ರಿಂದ ದಿ:- 28.07.2016ರ ವರೆಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು. ವಿಚಾರಣೆ ಸಮಯದಲ್ಲಿ ವಾದಿ ಪರವಾಗಿ ಶ್ರೀ ಕೆ ಪ್ರಸನ್ನಕುಮಾರ್, ವಕೀಲರು ಹ.ಬೊ.ಹಳ್ಳಿ ಮತ್ತು ಪ್ರತಿವಾದಿ ಪರವಾಗಿ ಶ್ರೀ ಹೆಚ್ ಸತ್ಯನಾರಾಯಣ, ವಕೀಲರು ಹ.ಬೊ.ಹಳ್ಳಿ ಇವರು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ.

ವಾದಿ ಪರವಕೀಲರು ತಮ್ಮ ಮೌಖಿಕ ವಾದ ಮಂಡಿಸುತ್ತಾ, ವಿವಾದಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ ಹರಿಜನ ಮರಿಯವ್ವ ತಾಯಿ ಲೇಟ್ ಹರಿಜನ ಗಂಗವ್ವ ವಲ್ಲಭಾಪುರ ಗ್ರಾಮ ಇವರ ಹೆಸರಿನಲ್ಲಿ ಹಕ್ಕು ದಾಖಲೆ ಇದ್ದು ಅವರು ದಿನಾಂಕ:04.11.15ರಂದು ಮರಣ ಹೊಂದಿದ್ದು ಅವರ ವಾರಸುದಾರರಾದ ವಾದಿಗಳು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದು ಕಾನೂನುಬದ್ಧವಾಗಿರುತ್ತದೆ ಈ ಬಗ್ಗೆ ತಕರಾರು ಸಲ್ಲಿಸಿರುವ ಪ್ರತಿವಾದಿಗೆ ತಕರಾರು ಸಲ್ಲಿಸಲು ಯಾವುದೇ

ಹಕ್ಕು ಇರುವುದಿಲ್ಲಾ, ಈ ಹಿಂದೆ ಪಟ್ಟಾದಾರರು ತಕರಾರುದಾರರ ವಿರುದ್ದ ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆದಿರುತ್ತಾರೆ ಆದ್ದರಿಂದ ತಕರಾರುದಾರರ ತಕರಾರು ಅರ್ಜಿಯನ್ನು ವಜಾಗೊಳಿಸಿ ವಾಧಿಗಳ ಹೆಸರಿನಲ್ಲಿ ಜಂಟಿಯಾಗಿ ಹಕ್ಕುಬದಲಾವಣೆಗೆ ಆದೇಶಿಸುವಂತೆ ವಿನಂತಿಸಿರುತ್ತಾರೆ.

ಈ ಬಗ್ಗೆ ಪ್ರತಿವಾಧಿ ಪರ ವಕೀಲರು ವಾದಿ ಪರವಕೀಲರ ಎಲ್ಲಾ ಅಂಶಗಳನ್ನು ತಳ್ಳಿಹಾಕುತ್ತಾ, ವಿವಾದಿತ ಜಮೀನನ್ನು ಮೃತ ಪಟ್ಟಾದಾರರು ಅವರ ಜೀವಿತ ಕಾಲದಲ್ಲಿ ವಿ: 02.00 ಎಕರೆ ಜಮೀನನ್ನು ಪ್ರತಿವಾದಿಗೆ ನೊಂದಣಿಯಲ್ಲದ ಅಗ್ರಿಮೆಂಟ್ ಮೂಲಕ ಮಾರಾಟ ಮಾಡಿರುತ್ತಾಳೆ, ಕಾರಾಣಾಂತರಗಳಿಂದ ನೋಂದಣಿ ಆಗಿರುವುದಿಲ್ಲಾ, ಅಂದಿನಿಂದಲೂ ಪ್ರತಿವಾದಿಯೇ ಸ್ವಾದೀನಾನುಭವ ಹೊಂದಿರುತ್ತಾರೆ, ಪಟ್ಟಾದಾರರು ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಪಡೆದಿರುವ ತಾತ್ಕಾಲಿಕ ಇಂಜಕ್ಷನ್ ಆದೇಶ ವಿರುದ್ದ ಹೊಸಪೇಟೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಪ್ರಕರಣ ಸಂ/ಎಂ.ಎ/17/2015ರಲ್ಲಿ ದಾಖಲಿಸಿದ್ದು ಹಾಲಿ ವಿಚಾರಣೆ ಹಂತದಲ್ಲಿರುತ್ತದೆ. ಆದ್ದರಿಂದ ಈ ನ್ಯಾಯಾಲಯದಲ್ಲಿ ವಾಧಿಯ ಕೋರಿಕೆಯಂತೆ ಯಾವುದೇ ಆದೇಶ ಮಾಡದೇ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಆದೇಶಿಸಲು ವಿನಂತಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿ ಪರ ವಕೀಲರು ಮಂಡಿಸಿದ ವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ,

1.ವಿವಾದಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ ಹರಿಜನ ಮರಿಯವ್ವ ತಾಯಿ ಲೇಟ್ ಹರಿಜನ ಗಂಗವ್ವ ವಲ್ಲಭಾಪುರ ಗ್ರಾಮ ಇವರ ಹೆಸರಿನಲ್ಲಿ ಹಕ್ಕುದಾಖಲೆ ಇರುತ್ತದೆ, ಆವರು ದಿನಾಂಕ 04.11.2015 ರಂದು ಮೃತರಾಗಿರುವುದು ದಿನಾಂಕ:23.11.2015ರ ಮರಣ ಪ್ರಮಾಣ ಪತ್ರದ ಮೂಲಕ ಕಂಡುಬರುತ್ತದೆ ಹಾಗೂ ಅವರ ವಾರಸುದಾರರಾಗಿ ವಾದಿಗಳು ಇರುವುದು ಉಪ ತಹಶೀಲ್ದಾರರು ಹಗರಿಬೊಮ್ಮನಹಳ್ಳಿ ಇವರು ನೀಡಿರುವ ದಿ:24.11.2015ರ ವಂಶವೃಕ್ಷ ಧೃಡೀಕರಣ ಪತ್ರದ ಪ್ರಕಾರ ತಿಳಿದು ಬರುತ್ತದೆ.

2.ಮೃತ ಪಟ್ಟಾದಾರರು ಪ್ರತಿವಾದಿಯ ವಿರುದ್ದ ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಒ.ಎಸ್/110/2015; ದಿ:19.08.2015ರ ಆಧೇಶದನ್ವಯ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆದಿರುತ್ತಾರೆ.

3.ಪ್ರತಿವಾದಿಯು ಈ ಹಿಂದೆ ಪಟ್ಟಾದಾರರಿಂದ ವಿ:02.00 ಎಕರೆ ಜಮೀನನ್ನು ಖರೀದಿಗೆ ಪಡೆದಿರುತ್ತೇನೆ ಎಂದು ತಿಳಿಸಿರುತ್ತಾರೆ, ಆದರೆ ಅವರು ಸಲ್ಲಿಸಿರುವ ದಾಖಲೆಯು ನೊಂದಣಿ ಆಗಿರುವುದಿಲ್ಲಾ.

4.ಪಟ್ಟಾದಾರರು ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಪಡೆದಿರುವ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶ ವಿರುದ್ದ ಹೊಸಪೇಟೆಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಎಂ.ಎ/17/2015ರಲ್ಲಿ ಮೇಲ್ಮನವಿ ದಾಖಲಿಸಿ ಹಾಲಿ ವಿಚಾರಣೆ ಹಂತದಲ್ಲಿರುವುದು ಪ್ರತಿವಾದಿ ಪರ ವಕೀಲರು ಹಾಜರುಪಡಿಸಿದ ದಾಖಲೆಯಿಂದ ಕಂಡುಬರುತ್ತದೆ.

ಈ ಎಲ್ಲಾ ಅಂಶಗಳಿಂದ ವಿವಾದಿತ ಜಮೀನಿನ ವಿವಾದದ ಕುರಿತು ಪಟ್ಟಾದಾರರು ಹ.ಬೊ.ಹಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಪಡೆದಿರುವ ತಾತ್ಕಾಲಿಕ ನಿರ್ಬಂದಕಾಜ್ಞೆಯ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯು ಹೊಸಪೇಟೆಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಎಂ.ಎ/17/2015ರಲ್ಲಿ ಮೇಲ್ಮನವಿ ದಾಖಲಿಸಿ ಹಾಲಿ ವಿಚಾರಣೆ ಹಂತದಲ್ಲಿರುವುದರಿಂದ ಉಭಯರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ನಿರ್ಧರಿಸಿಕೊಳ್ಳಬೇಕಾಗಿರುತ್ತದೆ ಆದ್ದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.578/2 ವಿ: 04.98 ಎಕರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ವಾದಿಗಳು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುತ್ತಾ ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

<u>ಪ್ರತಿಯನ್ನು</u>:

ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.